ಸಾವಿತ್ರಿ ಹೌಹಾರಿದಳಾದರೂ ಬೆಳಗ್ಗೆ ಅಥವ ಸಂಜೆ ಯಾವುದಾದರೂ ಒಂದು ಟೈಮು ಮುಸುರೆ ಪಾತ್ರೆಗಳನ್ನು ತೊಳೆದು ಕೊಟ್ಟರೆ ಸಾಕು, ಹಸಿದು ಬಂದಿರುವ ಮಕ್ಕಳಿಗೆ ನೇರವಾಗಿ ಏನನ್ನಾದರೂ ಬೇಯಿಸಿಕೊಡಬಹುದು. ರಾಶಿ ರಾಶಿ ಪಾತ್ರೆ ಬಿದ್ದಿರುವುದನ್ನು ನೋಡಿ ಸ್ಟೌ ಹೊಚ್ಚುವುದಿರಲಿ ಕೈ ಕಾಲೇ ಆಡದಂತಾಗುತ್ತದೆ. ವಾರಕ್ಕೆ ಒಂದು ದಿನವೋ ಎರಡು ದಿನವೋ ಬಟ್ಟೆ ಒಗೆದುಕೊಟ್ಟರೆ ಎಷ್ಟೋ ಸುಧಾರಿಸಿಕೊಂಡಂತಾಗುತ್ತದೆ ಎಂದು ಮನೆಗೆಲಸಕ್ಕೆ ನೇಮಿಸಿಕೊಳ್ಳುವ ತೀರ್ಮಾನಕ್ಕೆ ಬಂದಿದ್ದಳು. 'ಹಣ ಎಷ್ಟು ಕೇಳಬಹುದೆಂಬ' ಅನುಮಾನ ಬಗೆ ಹರಿಸಿಕೊಳ್ಳಲು ಪಕ್ಕದ ಮನೆಯ ಸರಸಮ್ಮನನ್ನು ಈ ಬಗ್ಗೆ ವಿಚಾರಿಸಿದಾಗ ಸರಸಮ್ಮನವರು, 'ನಾನೂ ಹಿಂದೆ ಆಯಮ್ಮನನ್ನು ಕರೆಸಿಕೊಂಡಿದ್ದೆ, ಆಗ ಸಾವಿರದ ಇನ್ನೂರು ಕೊಡುತ್ತಿದ್ದೆ' ಅಂದರು. ಗಂಡ ಹೆಂಡತಿ ಕೂಡಿ ಹಣ ಖರ್ಚಾದರೂ ಸರಿಯೇ ಒಂದಿಷ್ಟು ಕೈ ಬಿಡುವಾದರೆ ಸಾಕು ಎಂದು ನಿರ್ಧರಿಸಿದ್ದರಿಂದ ಒಂದು ದಿನ ಶಿವಮ್ಮ ಮನೆ ಮುಂದೆ ಹೋಗುವುದನ್ನು ಕಾದುಕೊಂಡಿದ್ದು ಅವಳ ವೇಗದ ನಡಿಗೆಯನ್ನು ತಡೆದು ಸಾವಿತ್ರಿ ಮಾತಿಗೆಳೆದಿದ್ದಳು.

'ನಾವಿರೋದು ನಾಲ್ಕೇ ಜನ ಕಂಡ್ರಿ, ನಮ್ಮವೇನು ಜಾಸ್ತಿ ಪಾತ್ರೆ ಬಟ್ಟೆ ಇರಲ್ಲ, ಏನಂದ್ರೆ ನಾವಿಬ್ರು ಕೆಲ್ಸಕ್ಕೆ ಹೋಗದ್ರಿಂದ ಮಕ್ಳುನ್ನ ರೆಡಿ ಮಾಡಕೆ ಕಷ್ಟ ಆಗುತ್ತೆ ಅಂತ ಕೆಲ್ಸಕ್ಕೆ ಬೇಕು ಅನ್ಸುತ್ತೆ. ಬೆಳಿಗ್ಗೆ ಅಥವ ಸಂಜೆ ಒಂದರ್ಧಗಂಟೆ ಮಾಡಿಕೊಟ್ರೆ ಸಾಕು, ಆಮೇಲೆ ಬಂದು ಅಡುಗೆ ನಾವ್ ಮಾಡ್ಕಂತಿವಿ' ಅಂದಳು. 'ಎಷ್ಟು ಜನ ಇದ್ರು ಮಾಡ ಕೆಲ್ಸ ಮಾಡ್ಲೆಬೇಕಲ್ಲವಾ, ನಂಗೆ ಈಗಾಗ್ಲೆ ಮನೆಗಳು ಜಾಸ್ತಿ ಆಗೆವೆ. ಅವುನ್ನ ಮುಗ್ಸಿರೆ ಸಾಕಾಗ್ಯತೆ' ಅಂದು, 'ಏನೊ ಓಡಾಡೊ ಜಾಗ ಅಂತ ಬಂದೋಗ್ತಿನಿ, ಬೆಳಿಗ್ಗೆ ಅಂತು ಬರಕಾಗಲ್ಲ, ಸಂಜೆಗಾದ್ರೆ ಹೇಳ್ಬಹುದು' ಅಂದಳು. ಸಾವಿತ್ರಿಗೂ ಯಾಕೊ ಸಂಜೆದೆ ಸರಿ ಎನಿಸಿ, 'ನಾವು ಆಫೀಸಿಂದ ಬರೊದ್ರೊಳಗೆ ಮಾಡ್ಕೊಟ್ಟಿರಬೇಕು' ಅಂದ್ಲು. 'ಆತು ತಗಳ್ರಿ ಸಂಜೆಗೆ ಮೊದ್ಲು ಮನೆ ನಿಮ್ದೆ ಮಾಡ್ಕೆಂಡು ಮುಂದುಕೋಗ್ತಿನಿ' ಎಂದು, 'ಬಟ್ಟೆ ಮಾತ್ರ ವಾರುಕ್ಕೊಂದಿನನೆ ಆಗದು,

